ದಿಃ **19-06-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಸಾಕ್ಷಿಯ ಪ್ರಮಾಣಿಕೃತ ಹೇಳಿಕೆಃ

ನಾನು ನನ್ನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದ ವಿಚಾರಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ, ಬರೆಸಿ ಓದಿಸಿ, ಕೇಳಿ ತಿಳಿದುಕೊಂಡಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ.

1. ಆರೋಪಿ ನನಗೆ ನೀಡಿದ ದಿಃ 24-04-2026 ರ ರೂ. 1,00,000/- ಎಸ್ ಬಿ ಐ ಬ್ಯಾಂಕ್, ಕುಂದಗೋಳ ಶಾಖೆಯ ಚಕ್ ನಂಬರ 272682 ಮೂಲ ಚಕ್ಕನ್ನು ನಿಪಿ.1 ಎಂದು, ಆರೋಪಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಬ್ಯಾಂಕ್ ಹಿಂಬರಹವನ್ನು ನಿಪಿ.2 ಎಂದು, ನೋಟೀಸ್ ನಿಪಿ.3 ಎಂದು, ಅಂಚೆ ರಸೀದಿಯನ್ನು ನಿಪಿ.4 ಎಂದು, ಅಂಚೆ ಸ್ವೀಕೃತಿ ನಿಪಿ. 5 ಎಂದು, ಆರೋಪಿಯ ಸಹಿ ನಿಪಿ. 5 ಎ ಎಂದು ಗುರುತಿಸಲಾಯಿತು.

ಆರೋಪಿ ನನಗೆ ಈ ವರೆಗೆ ಹಣ ನೀಡಿಲ್ಲ. ಆದ್ದರಿಂದ, ನನ್ನ ದೂರಿನಲ್ಲಿ ಕೋರಿದಂತೆ ಕಾನೂನು ಕ್ರಮ ಜರುಗಿಸಬೇಕೆಂದು ಕೋರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಿಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.